ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಡಾ॥ ಚಂದ್ರಶೇಖರ್ ಬಿ. ಪಾಟೀಲ್ (ಪದವೀಧರರ ಕ್ಷೇತ್ರ)

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 1613

ಉತ್ತರ ದಿನಾಂಕ : 11.03.2022

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕಲ್ಯಾಣ ಕರ್ನಾಟಕ ಭಾಗದ ಗ್ರಾಮೀಣ ಪ್ರದೇಶದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು;	ಘಟಕಗಳನ್ನು ಸುಸ್ಥಿತಿಯಲ್ಲಿಡಲು ಈ ಕೆಳಗಿನಂತೆ ಕ್ರಮ ವಹಿಸಲಾಗುತ್ತಿದೆ. • ಸ್ಥಾಪಿಸಲಾದ ಘಟಕಗಳ Defect Liability Period ಮುಗಿಯುವುದರೊಳಗೆ ಕಾರ್ಯನಿರ್ವಹಿಸದೇ ಇದ್ದಲ್ಲಿ, ಅಂತಹ ಘಟಕಗಳನ್ನು ಸ್ಥಾಪಿಸಿದ ಏಜೆನ್ಸಿರವರಿಗೆ ಕರಾರಿನಂತೆ ನೋಟೀಸ್‌ಗಳನ್ನು ನೀಡಿ ಘಟಕ ದುರಸ್ತಿ ಮಾಡಿಸಲಾಗುತ್ತಿದೆ ಮತ್ತು ವಿಫಲವಾದ ಗುತ್ತಿಗೆದಾರರ ಕರಾರನ್ನು Rescind ಮಾಡಲು ಕ್ರಮವಹಿಸಲಾಗುತ್ತಿದೆ. ಹಾಗೂ ಸದರಿ ಘಟಕಗಳನ್ನು ನಿಯಮಾನುಸಾರ ಇಲಾಖಾ ವತಿಯಿಂದ ಸರಿಪಡಿಸಿ ಕಾರ್ಯನಿರ್ವಹಿಸುವಂತೆ ಕ್ರಮಜರುಗಿಸಲಾಗುತ್ತಿದೆ. • Defect Liability Period ಪೂರ್ಣಗೊಳಿಸಿದಂತಹ ಘಟಕಗಳಿಗೆ ವಾರ್ಷಿಕ ಕಾರ್ಯಾಚರಣೆ ಮತ್ತು ನಿರ್ವಹಣೆ ನಿರ್ವಹಿಸುತ್ತಿರುವ ಗುತ್ತಿಗೆದಾರರು ಘಟಕಗಳನ್ನು ಸುಸ್ಥಿತಿಯಲ್ಲಿಡಲು ವೈಫಲ್ಯರಾದಲ್ಲಿ ನಿಯಮಾನುಸಾರ ನೋಟೀಸ್‌ಗಳನ್ನು ನೀಡಿ ಗುತ್ತಿಗೆದಾರರ ಕಾಸ್ಟ್ ಅಂಡ್ ರಿಸ್ಕ್ ಆಧಾರದಲ್ಲಿ ಗುತ್ತಿಗೆ ರದ್ದುಪಡಿಸಿ ನಿಯಾಮಾವಳಿಯಂತೆ ಇಲಾಖಾ ವತಿಯಿಂದ ಇತರೆ ಗುತ್ತಿಗೆದಾರರನ್ನು ನೇಮಿಸಿ ಸುಸ್ಥಿತಿಗೆ ತರಲು ಕ್ರಮವಹಿಸಲಾಗುತ್ತಿದೆ. • ಮುಂದುವರೆದು ಗ್ರಾಮ ಪಂಚಾಯಿತಿಗಳಿಗೆ ನಿರ್ವಹಣೆಗಾಗಿ ವಹಿಸಲಾದ ಘಟಕಗಳನ್ನು ಸುಸ್ಥಿತಿಯಲ್ಲಿಡಲು ಮಾಹೆಯಾನ ಪ್ರತಿ ಘಟಕಕ್ಕೆ ಇಲಾಖೆಯಿಂದ ರೂ.3000.00ಗಳ ಅನುದಾನ ಒದಗಿಸಲಾಗುತ್ತಿದೆ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಇತರೆ ಅನುದಾನಗಳನ್ನು ಬಳಸಿ ಘಟಕಗಳನ್ನು ಸುಸ್ಥಿತಿಯಲ್ಲಿಡಲು ಕಾಲಕಾಲಕ್ಕೆ ಸೂಚನೆಗಳನ್ನು ಸಹ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನೀಡಲಾಗುತ್ತಿದೆ.

ಇ)	ಸರ್ಕಾರಕ್ಕೆ ಹೊಸ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆಗೆ ಪ್ರಸ್ತಾವನೆ ಬಂದಿದೆಯೇ, ಬಂದಿದ್ದಲ್ಲಿ, ವಿವರ ನೀಡುವುದು?	ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆಗೆ ಪ್ರಸ್ತಾವನೆ ಸಲ್ಲಿಕೆಯಾಗಿದ್ದಲ್ಲಿ ಸದರಿ ಜನವಸತಿಯಲ್ಲಿನ ನೀರಿನ ಗುಣಮಟ್ಟವನ್ನು ಪರೀಕ್ಷಿಸಿ ಹಾಗೂ ಶುದ್ಧೀಕರಿಸುವ ವಿಧಾನವನ್ನು ಸ್ಥಿರೀಕರಿಸಿ ಘಟಕಗಳನ್ನು ನಿಯಾಮಾನುಸಾರ ಟೆಂಡರ್ ಕರೆದು ಅನುಷ್ಠಾನಗೊಳಿಸಲು ಕ್ರಮಜರುಗಿಸಲಾಗುತ್ತಿದೆ.

ಸಂ:ಗ್ರಾಕುನೀ&ನೈಇ 159 ಗ್ರಾನೀಸ(4)2022

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು